**ದಿ:24.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು:-**ವಾದಿ ಪರ ಶ್ರೀ**. K.S.P.,** ವಕೀಲರಿಂದ:-

ದಾವಾ ಸ್ವತ್ತುಗಳನ್ನು ಅಳತೆ ಮಾಡಲು ನನ್ನ ತಕರಾರು ಇರುತ್ತದೆ . ನನ್ನ ಸ್ವತ್ತನ್ನು ಅಳತೆ ಮಾಡಿಸಲು ನನ್ನ ಯಾವುದೇ ತಕರಾರು ಇರುವುದಿಲ್ಲ . ನಾನು ನನ್ನ ಆಸ್ತಿಯನ್ನು ಈ ಹಿಂದೆ ಸರ್ವೆ ಮಾಡಿಸಿರುವುದಿಲ್ಲ . ವಾದಿಗಳು ದಾವಾ ಆಸ್ತಿಯನ್ನು ಖರೀದಿ ಮಾಡುವ ಸಂದರ್ಬದಲ್ಲಿ ಅಳತೆ ಮಾಡಿಸಿಕೊಂಡು ಹದ್ದು ಬಸ್ತು ಮಾಡಿಸಿಕೊಂಡು ತಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಗಳು ದಾವಾ ಆಸ್ತಿಯ ಪಶ್ಚಿಮ ದಿಕ್ಕಿಗೆ ಮನೆ ಕಟ್ಟಿಕೊಂಡು ವಾಸ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಖರೀದಿ ಮಾಡಿದ ದಾವಾ ಸ್ವತ್ತಿನಲ್ಲಿ ವಾದಿಗಳು ಸ್ವಾಧೀನ ಅನುಭವ ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಪೂರ್ವ ದಿಕ್ಕನಲ್ಲಿ ಖಾಲಿ ಜಾಗ ಇದ್ದು ಅದರಲ್ಲಿ ವಾದಿಗಳು ಸ್ವಾಧೀನ ಅನುಭವ ಇರುತ್ತಾರೆ ಎಂದರೆ ಸರಿಯಲ್ಲ. ನಾನು ಹಲವಾರು ಬಾರಿ ವಾದಿಯ ದಾವಾ ಆಸ್ತಿ ಸ್ವಾಧೀನಕ್ಕೆ ತೊಂದರೆಯನ್ನ ನೀಡುತ್ತಾ ಬಂದಿರುತ್ತೇನೆ ಎಂದರೆ ಸರಿಯಲ್ಲ. ಈ ಬಗ್ಗೆ ನಮ್ಮ ಗ್ರಾಮದಲ್ಲಿ ಪಂಚಾಯತಿಯಲ್ಲಿ ಆಗಿರುತ್ತಂದೆ , ಪಂಚಾಯತಿಯಲ್ಲಿ ವಾದಿಗಳಿಗೆ ತೊಂದರೆ ನೀಡಬಾರದು ಎಂದು ನನಗೆ ತೀರ್ಮಾನ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಪಂಚಾಯತಿಯಲ್ಲಿ ವಾದಿಗಳಿಗೆ ತೊಂದರೆ ನೀಡುವುದಿಲ್ಲ ಎಂದು ಒಪ್ಪಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸರ್ಕಾರಿ ನೌಕರ ಆದ ಕಾರಣ ಬೇರೆ ಕಡೆ ಕೆಲಸ ಮಾಡಿಕೊಂಡು ಇರುತ್ತೇನೆ , ಆದ ಕಾರಣ ಪಂಚಾಯತಿಯ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸುಳ್ಳು ದಾಖಲೆಗಳನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸ್ವತಿನ ಚೆಕ್ ಬಂದಿ ಪೂರ್ವಕ್ಕೆ: ನಮ್ಮದೇ ಸೈಟ್ ಇರುತ್ತದೆ . ಪಶ್ಚಿಮಕ್ಕೆ: ವಾದಿ ಸುನಂದಮ್ಮ ಅವರ ಮನೆ , ಉತ್ತರಕ್ಕೆ: ಅಕ್ಕಿ ಮೂಗಪ್ಪ ಮತ್ತು ಬಸಪ್ಪ ಅವರ ಮನೆ ಮತ್ತು ದಕ್ಷಿಣಕ್ಕೆ: ದಾರಿ ಇರುತ್ತದೆ . ನಮ್ಮ ಪಶ್ಚಿಮ ದಿಕ್ಕಿಗೆ ಮತ್ತು ಸುನಂದಮ್ಮ ಅವರ ಮನೆಯ ಮಧ್ಯದಲ್ಲಿರುವ ಖಾಲಿ ಜಾಗವು ವಾದಿಗೆ ಸೇರಿದ್ದು ಇರುತ್ತದೆ ಎಂದರೆ ಸರಿಯಲ್ಲ. ನನಗೆ ಗಜ ಮತ್ತ ಅಡಿಗಳ ಲೆಕ್ಕದ ಬಗ್ಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ

ಎಂದರೆ ಸರಿಯಲ್ಲ. ವಾದಿಯು ದಾವಾ ಆಸ್ತಿಗೆ ಸಂಬಂದಿಸಿದ ಹಾಗೆ ಕಾನಿಶುವಾರಿ ನಂಬರ್ 33 ರಲ್ಲಿ 36 X 51 ಅಡಿಗಳ ಬಗ್ಗೆ ದಾಖಲೆಗಳು ಹಾಜರುಪಡಿಸಿರುತ್ತಾರೆ ಎಂದರೆ ಸರಿಯಲ್ಲ. ವಾದಿಯು ನಿಪಿ 1 ಕ್ರಯ ಪತ್ರದ ಆಧಾರದ ಮೇಲೆ ವೀರಮ್ಮ ಮತ್ತು ಚಂದ್ರಮ್ಮ ಅವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಗೆ ತುಂಬಾ ವಯಸ್ಸಾಗಿರುತ್ತದೆ ಅವರ ಮಕ್ಕಳು ಸಹ ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡು ಇರುತ್ತಾರೆ ಎಂದರೆ ನನಗೆ ಗೋತ್ತಿಲ್ಲ . ವಾದಿಗೆ ತುಂಬಾ ವಯಸ್ಸಾದ ಕಾರಣ ಅವರಿಗೆ ತೊಂದರೆ ನೀಡಲು , ಅವರಿಗೆ ಸೇರಿದ ದಾವಾ ಆಸ್ತಿಗೆ ತೊಂದರೆ ಕೋಡುತ್ತಾ ಬಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಈ ಬಗ್ಗೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು, ಜಗಳೂರು